**ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಮಾಡಿಸಲಾಯಿತು.**

**ದಿಃ23-09-2025**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ವೈ ಕೆ ವಕೀಲರಿಂದಃ**

ನಾನು ಆರೋಪಿಯ ಪತ್ನಿಯ ಹೆಸರು ಶಮಂತಕಮಣಿ ಎಂದರೆ ನನಗೆ ನಿಖರವಾಗಿ ಗೊತ್ತಿಲ್ಲ. ನಾನು ಅವರನ್ನು ನೋಡಿರುತ್ತೇನೆ. ಆರೋಪಿ ಮನೆಗೆ 5-6 ಬಾರಿ ಭೇಟಿ ನೀಡಿರುತ್ತೇನೆ. ಆದರೆ ಅವರ ಜೊತೆ ಮಾತಾಡಿರುವುದಿಲ್ಲ. ದಿಃ 13.07.2020 ರಂದು ಶಮಂತಕಮಣಿ ರವರ ಖಾತೆಯಿಂದ ನನ್ನ ಬ್ಯಾಂಕ್ ಖಾತೆಗೆ 3 ಲಕ್ಷ ಹಣ ವರ್ಗಾವಣೆಯಾಗಿರುತ್ತದೆ ಎಂದರೆ ಬಂದಿರಬಹುದು. ಆರೋಪಿ ಆಗಿಂದ್ದಾಗೆ ನನ್ನ ಬಳಿ ಹಣ ಪಡೆದು ಶಮಂತಕಮಣಿ ರವರ ಖಾತೆಯಿಂದ ಹಣ ವರ್ಗಾವಣೆ ಮಾಡುತ್ತಿದ್ದರು. ಎಷ್ಟು ಬಾರಿ ಹಣ ವರ್ಗಾವಣೆ ಮಾಡಿರುತ್ತಾರೆ ಎಂದು ನೆನಪಿಲ್ಲ.

ಆರೋಪಿ ನನ್ನ ಬಳಿ 3-4 ಬಾರಿ ಹಣ ಪಡೆದಿರುತ್ತಾರೆ. ಒಂದು ಬಾರಿ 4 ಲಕ್ಷ ಕೊಟ್ಟಿರುತ್ತೇನೆ ಮತ್ತು ಸುಮಾರು ಬಾರಿ ಸಣ್ಣಪುಟ್ಟ ಹಣ ಪಡೆದಿರುತ್ತಾರೆ ನನಗೆ ನೆನಪಿಲ್ಲ. ಹಿಂದೆ ಪಡೆದಿದ್ದ ಹಣವನ್ನು ಅಕೌಂಟ್ ಮೂಲಕ ಮತ್ತು ನಗದು ಮೂಲಕ ನೀಡಿರುತ್ತಾರೆ. ಅಕೌಂಟ್ ಮೂಲಕ ಎಷ್ಟು ಹಣ ವಾಪಸ್ಸು ನೀಡಿರುತ್ತಾರೆ ಎಂದು ನೆನಪಿಲ್ಲ. ಆರೋಪಿ ಹಣ ಪಡೆದ 2-3 ತಿಂಗಳಲ್ಲಿ ವಾಪಸ್ಸು ನೀಡುತ್ತಿದ್ದರು. ನಾನು ಬಡ್ಡಿಗಾಗಿ ಹಣ ನೀಡಿರುವುದಿಲ್ಲ. ಹಿಂದೆ ನಾನು ನೀಡಿದ ಸಾಲಕ್ಕೆ ಆರೋಪಿಯಿಂದ ಯಾವುದೇ ಚೆಕ್ ಅಥವಾ ದಾಖಲಾತಿ ಪಡೆದಿರುವುದಿಲ್ಲ. ಬಾಳೆಗದ್ದೆಯಲ್ಲಿ ಮೆಣಸು ವ್ಯಾಪಾರಸ್ಥರಾದ ದಿನೇಶ್ ಎಂಬುವವರ ಪರಿಚಯವಿರುತ್ತದೆ. ಅವರ ಪರಿಚಯ ಸುಮಾರು 12 ವರ್ಷದಿಂದ ಇರುತ್ತದೆ. ಅವರು ಮೆಣಸನ್ನು ಬಿಟ್ಟು ಬೇರೆ ಯಾವ ವ್ಯಾಪಾರ ಮಾಡುತ್ತಾರೆ ಎಂದು ಗೊತ್ತಿಲ್ಲ. ದಿನೇಶ್ ಮತ್ತು ನನ್ನ ನಡುವೆ ಹಣದ ವ್ಯವಹಾರ ಇರುತ್ತದೆ. ದಿನೇಶ ರವರು ತಮಗೆ ಬರಬೇಕಾದ ಹಣವನ್ನು ನನ್ನ ಖಾತೆಗೆ ಜಮ ಮಾಡಿಸುತ್ತಿದ್ದರು ಎಂದರೆ ಸರಿಯಲ್ಲ.

ದಿನೇಶ್ ರವರ ಕಚೇರಿ ಬಾಳೆಗದ್ದೆಯಲ್ಲಿ ಇರುತ್ತದೆ. ನಾನು ದಿನೇಶ್ ರವರ ಬಳಿ ಹಣ ಪಡೆಯುತ್ತಿದ್ದೆ. ಅದೇ ರೀತಿ ಅವರು ನನ್ನ ಬಳಿ ಹಣ ಪಡೆಯುತ್ತಿದ್ದರು. ಅವರೊಂದಿಗೆ ನಾನು ಮೆಣಸು ವ್ಯಾಪಾರ ಮಾಡುವುದಿಲ್ಲ. ಆರೋಪಿ ಸಹ ದಿನೇಶ್ ರವರಿಗೆ ಪರಿಚಯವಿರುತ್ತಾರೆ

ಎಂದರೆ ಸಾಕ್ಷಿ ದಿನೇಶ್ ರವರು ಹೇಳುತ್ತಿದ್ದರು ಆದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಿನೇಶ್ ರವರ ಸಂಬಂಧಿಕರಾದ ಪೂವಮ್ಮ ಐಗೂರು ಗ್ರಾಮದಲ್ಲಿ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ದಿನೇಶ್ ರವರ ಜೊತೆ ಸದರಿ ರವರ ಮನೆಗೆ ಹೋಗಿರುವುದಿಲ್ಲ. ದಿನೇಶ್ ರವರ ಮೂಲ ಊರು ಸಕಲೇಶಪುರ ಇರುತ್ತದೆ. ಅವರು ಮೊದಲು ಕಿರಗೂಂದುರು ಗ್ರಾಮದಲ್ಲಿ ವಾಸವಿದ್ದರು ಎಂದರೆ ಗೊತ್ತಿಲ್ಲ.

2018 ರಲ್ಲಿ ಆರೋಪಿ ದಿನೇಶ್ ರವರಿಂದ ಮೆಣಸು ಕೊಡುತ್ತೇನೆ ಎಂದು ಹೇಳಿ 5 ಲಕ್ಷ ಸಾಲ ಪಡೆದಿದ್ದರು ಎಂದರೆ ಗೊತ್ತಿಲ್ಲ. ದಿನೇಶ್ ರವರು ಆರೋಪಿಗೆ 5 ಲಕ್ಷ ಹಣ ನೀಡಿ ಆರೋಪಿಯ ವಿಜಯ ಬ್ಯಾಂಕ್ ನ 2 ಖಾಲಿ ಚೆಕ್ ಗಳನ್ನು ಪಡೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಐದು ಲಕ್ಷ ರೂಪಾಯಿಗಳ ಪೈಕಿ ಆರೋಪಿಯು ತನ್ನ ಪತ್ನಿಯ ಖಾತೆಯಿಂದ ನನ್ನ ಖಾತೆಗೆ ರೂಪಾಯಿ ಮೂರು ಲಕ್ಷ ಹಣವನ್ನು ವರ್ಗಾವಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಸದರಿ ಸಮಯದಲ್ಲಿ ಫಸಲು ಇಲ್ಲದ ಕಾರಣ ಮೆಣಸನ್ನು ದಿನೇಶ ರವರಿಗೆ ಮಾರಾಟ ಮಾಡಲು ಸಾಧ್ಯವಾಗದೇ ಇರುವುದರಿಂದ ಅವರ ಒತ್ತಾಯದ ಮೇರೆಗೆ ಆರೋಪಿಯು ತನ್ನ ಪತ್ನಿಯ ಖಾತೆಯಿಂದ ನನ್ನ ಖಾತೆಗೆ ಹಣ ವರ್ಗಾವಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಉಳಿಕೆ 2 ಲಕ್ಷ ಹಣವನ್ನು ಲಾಕ್ ಡೌನ್ ಕಾರಣ ಹಣವನ್ನು ನೀಡದೇ ಇರುವುದರಿಂದ ನಾನು ಮತ್ತು ದಿನೇಶ್ ರವರು ಸಂಚು ರೂಪಿಸಿ ಆರೋಪಿಯ ಭದ್ರತೆಗಾಗಿ ನೀಡಿದ ಚೆಕ್ ನ್ನು ದುರುಪಯೋಗ ಪಡಿಸಿಕೊಂಡು ನನ್ನ ಮೂಲಕ ಈ ಕೇಸನ್ನು ದಾಖಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿ ನಡುವೆ ಯಾವುದೇ ವ್ಯವಹಾರ ಆಗಿರುವುದಿಲ್ಲ ಮತ್ತು ಆರೋಪಿ ನನಗೆ ಯಾವುದೇ ಚೆಕ್ ನೀಡಿಲ್ಲ ಎಂದರೆ ಸರಿಯಲ್ಲ.

ಒಂದು ವೇಳೆ ನಾನು ಆರೋಪಿಗೆ 10 ಲಕ್ಷ ನೀಡಿದ್ದರೆ ಅದನ್ನು ನನ್ನ ತೆರಿಗೆ ಪಾವತಿಯಲ್ಲಿ ನಮೂದಿಸುತ್ತಿದೆ ಮತ್ತು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದೆ ಆದರೆ ಯಾವುದೇ ಹಣ ನೀಡದೇ ಇರುವುದರಿಂದ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ತೆರಿಗೆ ಪಾವತಿಯಲ್ಲಿ 10 ಲಕ್ಷ ನಮೂದಿಸಿರುತ್ತೇನೆ ಎಂದು ನುಡಿಯುತ್ತಾರೆ. 2022-2023 ಆದಾಯ ತೆರಿಗೆ ಪಾವತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ನಾನು ಆರೋಪಿಗೆ ಯಾವುದೇ ಹಣ ನೀಡದೇ ಇರುವುದರಿಂದ ತೆರಿಗೆ ಪಾವತಿಯಲ್ಲಿ ನಮೂದು ಮಾಡಿಲ್ಲ ಎಂದರೆ ಸಾಕ್ಷಿ ನಾನು ಆರೋಪಿಗೆ ನಗದಾಗಿ ಹಣ ನೀಡಿದ್ದರಿಂದ ಅದನ್ನು ನಮೂದಿಸಿದ್ದಾರೋ ಇಲ್ಲವೋ ಎಂದು ನಮ್ಮ ಲೆಕ್ಕಿಗರ ಬಳಿ ಕೇಳಬೇಕು ಎಂದು ನುಡಿಯುತ್ತಾರೆ. ನಗದಾಗಿ ಹಣ ವರ್ಗಾವಣೆಯಾಗಿದ್ದರೂ ಸಹ ತೆರಿಗೆ ಪಾವತಿಯಲ್ಲಿ ನಮೂದಿಸುತ್ತಾರೆ ಎಂದರೆ ಸರಿ.

ಆರೋಪಿ ನನ್ನನ್ನು ಸಂಪರ್ಕಿಸಿಲ್ಲ ಮತ್ತು ಯಾವುದೇ ಹಣ ಕೇಳಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಹಣ ನಗದಾಗಿ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿ ನನಗೆ ಯಾವುದೇ ಚೆಕ್ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿ ಚೆಕ್ ನಲ್ಲಿ ಯಾವುದೇ ಅಕ್ಷರಗಳನ್ನು ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ದಿನೇಶ ರವರಿಗೆ ನೀಡಿದ 2 ಚೆಕ್ ಗಳ ಪೈಕಿ ಒಂದು ಚೆಕ್ ನ್ನು ದುರುಪಯೋಗ ಪಡಿಸಿಕೊಂಡು ನಾನು ಈ ಕೇಸ ನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಇನ್ನೊಂದು ಚೆಕ್ ದಿನೇಶ ರವರ ಬಳಿ ಇರುತ್ತದೆ ಎಂದರೆ ಸರಿಯಲ್ಲ. 2020-2023 ರ ವರೆಗೂ ನಾನು ಅಡಿಟ್ ಮಾಡಿಸುತ್ತಿದ್ದ ವ್ಯಕ್ತಿಯ ಹೆಸರು ನೆನಪಿಲ್ಲ. ಆದರೆ ಅವರ ಕಚೇರಿ ಸಕಲೇಶಪುರದ ನೇತಾಜಿ ರಸ್ತೆಯಲ್ಲಿ ಇರುತ್ತದೆ. ಪಂಪಾ ಸ್ಟುಡಿಯೋ ಪಕ್ಕ ಕಟ್ಟಡದಲ್ಲಿ ಅವರ ಕಚೇರಿ ಇರುತ್ತದೆ. ನನ್ನ ಅಕೌಂಟ್ ಹೆಸರು ಶಿವಕುಮಾರ್ ಎಂದು ಮಾತ್ರ ನಮೂದಿರುತ್ತದೆ. ನಾನು ಆರೋಪಿ ಪರಿಚಯ ಇಲ್ಲದೇ ಇದ್ದರೂ ಮತ್ತು ಯಾವುದೇ ವ್ಯವಹಾರ ಇಲ್ಲದೇ ಇದ್ದರೂ ಹಣ ಕಬಳಿಸುವ ಉದ್ದೇಶದಿಂದ ಸುಳ್ಳು ಕೇಸನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/-

**ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**